ಜಯಕಿರಣ ದಿನಪತ್ರಿಕೆ
03.03.2024

# ಎನ್‌ಐಟಿಕೆಯಲ್ಲಿ 'ಇನ್ಸಿಡೆಂಟ್ 2024' ಉದ್ಘಾಟನೆ

(ಜಯಕಿರಣ ವರದಿ)

ಮಂಗಳೂರು: ದಕ್ಷಿಣ ಭಾರತದ ಅತಿದೊಡ್ಡ ಸಾಂಸ್ಕೃತಿಕ ಉತ್ಸವಗಳಲ್ಲಿ ಒಂದಾದ ಇನ್ಸಿಡೆಂಟ್ 2024ರ ಉದ್ಘಾಟನಾ ಸಮಾರಂಭವು ಸುರತ್ಕಲ್ ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕದಲ್ಲಿ ನಡೆಯಿತು. ಸಾಂಸ್ಕೃತಿಕ ಉತ್ಸವವು ಮಾರ್ಚ್ 3 ರವರೆಗೆ ನಡೆಯಲಿದ್ದು, ನಾಲ್ಕು ದಿನಗಳ ಕಾರ್ಯಕ್ರಮದ ಅವಧಿಯಲ್ಲಿ 45,000ಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿದೆ.

'ಇನ್ಸಿಡೆಂಟ್ 2024' ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಐಎಎಸ್ ಮುಕುಲ್ ಜೈನ್ ಭಾಗವಹಿಸಿದ್ದರು. ಮೋಟಾರ್ ಸ್ಪೋರ್ಟ್ ಅಥ್ಲೀಟ್ ಆಶಿಶ್ ರೌರಾನೆ ಅವರು ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಿದ್ದರು. ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಅಧ್ಯಕ್ಷತೆ ವಹಿಸಿದ್ದರು.



ಎನ್ ಐಟಿಕೆ ನಿರ್ದೇಶಕರು ಮತ್ತು ಡೀನ್ ಸ್ಟೂಡೆಂಟ್ಸ್ ವೆಲ್ಫೇರ್ ಮತ್ತು 'ಇನ್ಸಿಡೆಂಟ್ ' ತಂಡವು ಮುಖ್ಯ ಅತಿಥಿ ಮತ್ತು ಗೌರವ ಅತಿಥಿಯನ್ನು ಸನ್ಮಾನಿಸಿತು.

'ಇನ್ಸಿಡೆಂಟ್' ಬಗ್ಗೆ: ಇನ್ಸಿಡೆಂಟ್' ಎನ್‌ಐಟಿಕೆಯ ವಾರ್ಷಿಕ ಸಾಂಸ್ಕೃತಿಕ ಉತ್ಸವವಾಗಿದೆ ಮತ್ತು ಇದು ಭಾರತದ ಅತಿದೊಡ್ಡ ಸಾಂಸ್ಕೃತಿಕ ಉತ್ಸವಗಳಲ್ಲಿ ಒಂದಾಗಿದೆ. 1980ರಲ್ಲಿ ರೂಪುಗೊಂಡ 'ಇನ್ಸಿಡೆಂಟ್' ಇಡೀ ದಕ್ಷಿಣ ಭಾರತದಲ್ಲಿ ಎರಡನೇ ಅತಿದೊಡ್ಡ ವಿದ್ಯಾರ್ಥಿ-ಸಂಘಟಿತ ಉತ್ಸವವಾಗಿ ಬೆಳೆದಿದೆ. ಉತ್ಸವವು ನಾಲ್ಕು ದಿನಗಳ ಕಾಲ ನಡೆಯಲಿದ್ದು, ವಿವಿಧ ಕಲಾ ಪ್ರಕಾರಗಳಲ್ಲಿ ಹಲವಾರು ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.